**<u>ದಿನಾಂಕಃ 19-09-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

**<u>ಮುಂದುವರೆದ ಪಾಟೀಸವಾಲುಃ 8 ಮತ್ತು 9 ನೇ ಪ್ರತಿವಾದಿ ಪರ ಎಸ್ ಎಸ್ ಪಿ ವಕೀಲರಿಂದಃ</u>**

ನನ್ನ ಅಣ್ಣ ಧರ್ಮೇಗೌಡ, ಬೋರೇಗೌಡ ಹಾಗೂ ನನ್ನ ತಾಯಿ ಇವರೆಲ್ಲರೂ 1995 ನೇ ಇಸವಿಯಲ್ಲಿ ಕುಟುಂಬದ ಸ್ವತ್ತುಗಳನ್ನೆಲ್ಲಾ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ನಾವೆಲ್ಲಾ ಒಟ್ಟು ಕುಟುಂಬದಲ್ಲಿ ಇದ್ದೆವು ಅವರು ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಅದು ನನಗೆ ಗೊತ್ತಿಲ್ಲ. ಮದುವೆ ಆದಾಗಿನಿಂದ ಮಾದಿಹಳ್ಳಿಯಲ್ಲಿ ನಾನು ವಾಸವಾಗಿದ್ದೇನೆ ಎಂದರೆ ಸಾಕ್ಷಿ ನಾನು ಶೆಟ್ಟಿಹಳ್ಳಿಯಲ್ಲೇ ವಾಸವಾಗಿದ್ದೇನೆ. ನಾನು ದಾವೆ ಹಾಕುವಾಗ ಮಾದಿಹಳ್ಳಿಯ ವಿಳಾಸ ನಮೂದಿಸಿದ್ದೇನೆ ಎಂದರೆ ಸರಿ. 1995-96 ರಲ್ಲಿ ವಿಭಾಗ ಆಗಿರುವ ಕಾರಣ ಆ ಬಗ್ಗೆ ಎಂ ಆರ್ ಸಂ.19/1995-96 ರಲ್ಲಿ ಅವರವರ ಹೆಸರಿಗೆ ಖಾತೆ ಸಹ ಬದಲಾವಣೆ ಆಗಿರುತ್ತದೆ ಎಂದರೆ ಅವರಿಗೆ ಖಾತೆ ಆಗಿರುವುದು ನನಗೆ ಗೊತ್ತಿಲ್ಲ ಎಲ್ಲಾ ಸುಳ್ಳು ಒಟ್ಟು ಕುಟಂಬಂದ ಆಸ್ತಿಯಲ್ಲೇ ಇದುದ್ದು. ಖಾತೆಯನ್ನು ಪ್ರಶ್ನೆ ಮಾಡಿ ನೀವೇನಾದರೂ ಮೇಲ್ಮನವಿ ಸಲ್ಲಿಸಿದ್ದೀರಾ ಎಂದರೆ ನಮಗೆ ಗೊತ್ತೇ ಇಲ್ಲ ಎನ್ನುತ್ತಾರೆ. ಈಗಲಾದರೂ ನೀವು ಅದನ್ನು ಪ್ರಶ್ನಿಸಿದ್ದಿರಾ ಎಂದರೆ ನಾವು ಪ್ರಶ್ನಿಸಿಲ್ಲ.

ದಾವಾ 4 ನೇ ಐಟಂ ಸ್ವತ್ತನ್ನು 6 ನೇ ಪ್ರತಿವಾದಿಗೆ ದಿಃ 24.04.2009 ರಲ್ಲಿ ನೊಂದಾಯಿತ ಕ್ರಯಪತ್ರದ ಮುಖಾಂತರ ಮಾರಾಟ ಮಾಡಲಾಗಿರುತತದೆ ಎಂರದೆ ಸರಿಯಲ್ಲ ಆ ರೀತಿ ಕ್ರಯಕ್ಕೆ ಪಡೆದುಕೊಂಡ ದಿನದಿಂದಲೇ 6 ನೇ ಪ್ರತಿವಾದಿ ಮಾಲೀಕರಾಗಿ ಸ್ವಾದೀನಾನುಭವದಲ್ಲಿ ಇದ್ದು ಅನುಭವವಿಸಿಕೊಂಡು ಬರುತ್ತಿದ್ದಾರೆ ಖಾತಾ ವರ್ಗಾವಣೆ ಅವರ ಹೆಸರಿನಲ್ಲೇ ಅಗಿದೆ ಎಂದರೆ ಸುಳ್ಳು. ಆನಂತರದಲ್ಲಿ 6 ನೇ ಪ್ರತಿವಾದಿಯು ಮಾಲೀಕರಾಗಿದ್ದ ಕಾರಣ ದಾವಾ 4 ನೇ ಅನುಸೂಚಿ ಸ್ವತ್ತನ್ನು 9 ನೇ ಪ್ರತಿವಾದಿಗೆ 05.04.2012 ರಲ್ಲಿ ಕ್ರಮ ಬದ್ಧ

ಕ್ರಯಪತ್ರದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು ಆನಂತರ 9 ನೇ ಪ್ರತಿವಾದಿಯೇ ಸದರಿ ಸ್ವತ್ತಿನ ಮಾಲೀಕರಾಗಿ ಸ್ವಾದೀನಾನುಭವದಲ್ಲಿ ಇದ್ದು ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಎಲ್ಲಾ ಸುಳ್ಳು ಎಲ್ಲಾ ಒಟ್ಟು ಕುಟುಂಬದ ಆಸ್ತಿ ಪಿತ್ರಾರ್ಜಿತ ಸ್ವತ್ತು ಆಗಿರುತ್ತದೆ ಎನ್ನುತ್ತಾರೆ.

ಆದೇ ರೀತಿ 5 ನೇ ಕ್ರಮಾಂಕದ ಸ್ವತ್ತನ್ನು 4 ನೇ ಪ್ರತಿವಾದಿ ಬೋರೇಗೌಡ 10 ನೇ ಪ್ರತಿವಾದಿಗೆ ದಿಃ 05.01.2011 ರಂದುನೊಂದಾಯಿತ ಕ್ರಯದ ಮುಖಾಂತರ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಅಂದಿನಿಂದ 5 ನೇ ಕ್ರಮಾಂಕದ ಸ್ವತ್ತು ಸಹ 10 ನೇ ಪ್ರತಿವಾದಿ ಹೆಸರಿನಲ್ಲೇ ಖಾತೆ ವಗೈರೆ ಆಗಿದ್ದು, ಅವರೇ ಮಾಲೀಕರಾಗಿ ಸ್ವಾದೀನಾನುಭವ ಅನುಭವಿಸಿಕೊಂಡು ಬರುತ್ತಿದ್ದಾರೆ ಎಂದರೆ ಎಲ್ಲಾ ಸುಳ್ಳು ಒಟ್ಟು ಕುಟುಂಬದ ಆಸ್ತಿ ಪಿತ್ರಾರ್ಜಿತ ಆಸ್ತಿ ಎಲ್ಲಾ ಒಟ್ಟಾಗಿಯೇ ಮಾಡಿಕೊಂಡು ಬರುತ್ತಿದ್ದೆವು ಎನ್ನುತ್ತಾರೆ. ಆ ರೀತಿ ಮಾರಾಟ ಮಾಡಿದ ಸ್ವತ್ತುಗಳನ್ನು ಪರಿವರ್ತನೆ ಮಾಡಿ ಅವುಗಳನ್ನು ನಿವೇಶನಗಳಾಗಿ ಮಾರಾಟ ಮಾಡಲಾಗಿದೆ ಎಂದರೆ ಸುಳ್ಳು. ನಿವೇಶನಗಳ ಚೆಕ್ಕುಬಂದಿ ಹೇಳಲಾಗುವುದಾ ಎಂದರೆ ಏನು ಮಾರಾಟ ಮಾಡಿದ್ದಾರೆ ಎಂಬುದೇ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ 6 ಮತ್ತು 10 ನೇ ಪ್ರತಿವಾದಿಗಳಿಗೆ ಕುಟುಂಬದ ಅವಶ್ಯಕತೆಗೋಸ್ಕರ ಸದಸ್ಯರ ನಿರ್ವಹಣೆಗೋಸ್ಕರ ಮಾರಾಟ ಮಾಡಿರುವ ಆಸ್ತಿಗಳಾಗಿರುತ್ತವೆ ಹಾಗೂ 6, 9 ಮತ್ತು 10 ನೇ ಪ್ರತಿವಾದಿಯರು ಸಾಮಾನ್ಯ ಸದುದ್ದೇಶದಿಂದ ಆಸ್ತಿಗಳನ್ನು ಖರೀದಿಸಿದವರಾಗಿರುತ್ತಾರೆ ಎಂದರೆ ಸರಿಯಲ್ಲ. ನಮಗೆಲ್ಲಾ ಕೊಡಬೇಕಾದನ್ನೆಲ್ಲಾ ಕೊಟ್ಟು ಕೇಳಿದಂತೆ ಮದುವೆಯನ್ನೆಲ್ಲಾ ಮಾಡಿಕೊಟ್ಟು ಖರ್ಚು ಮಾಡಿ ಹಣ ಕೊಟ್ಟು ಆನಂತರ 1995 ರಲ್ಲಿ ಕುಟುಂಬದ ಗಂಡು ಮಕ್ಕಳೆಲ್ಲಾ ವಿಭಾಗ ಮಾಡಿಕೊಂಡಿರುತ್ತಾರೆಎಂದರೆ ಸುಳ್ಳು. ಅದರಂತೆ ದಾವಾ ಆಸ್ತಿಗಳೆಲ್ಲವೂ ವಿಭಾಗವಾಗಿ ಅವರವರ ಹೆಸರಿನಲ್ಲಿ ಖಾತೆ ವಗೈರೆಯಾಗಿ ಮುಂದುವರೆದುಕೊಂಡು ಬಂದಿರುತ್ತದೆ ಎಂದರೆ ಸುಳ್ಳು. 6, 9 ಮತ್ತು 10 ನೇ ಪ್ರತಿವಾದಿಯರು

ಅವರವರ ಹೇಸರಿಗೆ ಮಾರಾಟಲ್ಪಟ್ಟ ಆಸ್ತಿಗಳ ಹಕ್ಕು ಮತ್ತು ಸ್ವಾದೀನದಲ್ಲಿ ಇದ್ದು ಮಾಲೀಕರಾಗಿ ಅನುಭವವಿಸಿಕೊಂಡು ಬರುತ್ತಿರುತ್ತಾರೆ ಎಂದರೆ ಸುಳ್ಳು. ನನಗೆ ಕ್ರಮ ಸಂ 4 ಮತ್ತು 5 ರ ಸ್ವತ್ತುಗಳ ಮೇಲೆ ಯಾವುದೇ ಭಾಗಾಂಶದ ಹಿಸ್ಸಾ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಉಳಿದ ಪ್ರತಿವಾದಿಗಳ ಪರ ವಕೀಲರಿಂದಃ**

**ವಕೀಲರ ಕೋರಿಕೆ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದಂತೆ ಗಣಕೀಕರಣಗೊಳಿಸಿ ಮುದ್ರಿಸಲಾಯಿತು.)

ಓ ಹೇ ಕೇ ಸರಿ ಇದೆ

(ದೇವಾನಂದ)
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಚನ್ನರಾಯಪಟ್ಟಣ